ಸಾಮಗ್ರಿಗಳನ್ನು ದೃಶ್ಯವಾರು ಹೊಂದಿಸಿ ಇಟ್ಟಿದ್ದುದನ್ನು ನಾನೂ ನೋಡಿದ್ದೆ. 15–20 ದಿನಗಳಿಂದ ತಮ್ಮ ಮನೆಯಲ್ಲಿಯೇ ಸಿದ್ಧತೆ ಮಾಡಿಕೊಂಡು, ಹೊಸ ಸಹಾಯಕ ನಟ ನಟಿಯರ ಸಂದರ್ಶನ ನಡೆಸುತ್ತಿದ್ದಾಗ ಗಿರೀಶರ ಮನೆ, ತೋಟ, ಹಿತ್ತಲ, ಅಲ್ಲಿಯ ವಿಶಾಲ ಮರಗಳ ಅಡಿಯ ಪ್ರಾಂಗಣಗಳೆಲ್ಲ ಹೊಸ ಕಾಡು, ಕಲಾಕ್ಷೇತ್ರದಂತೆ ಭಾಸವಾಗುತ್ತಿದ್ದುವು. ಅದನ್ನು ನೋಡಲು ಬರುತ್ತಿದ್ದ ಹೊರಗಿನ ಉತ್ಸುಕ ರಸಿಕರನ್ನು ದೂರದಿಂದಲೇ ನಿಯಂತ್ರಿಸುತ್ತಿದ್ದ ಸ್ವಯಂಸೇವಕರ, ಪೊಲೀಸರ ಪರದಾಟವನ್ನು ನೋಡುವುದೂ ಒಂದು ಜಾತ್ರೆಯ ದೃಶ್ಯವೇ ಆಗಿ ಪರಿಣಮಿಸಿತ್ತು. ಆದರೆ, ಶಂಕರನಾಗರ ಅನಿರೀಕ್ಷಿತ ಅಪಮೃತ್ಯುವಿನಿಂದಾಗಿ



ಎಲ್ಲವೂ ಬುಡಮೇಲಾಗಿತ್ತು. ಆ ಸಂದರ್ಭದಲ್ಲಿ ಗಿರೀಶರಿಗೆ ಆಗಿರಬಹುದಾದ ಆಘಾತಕ್ಕಿಂತ ನಮ್ಮ ಭಾಗದ ಕಲಾಪ್ರಪಂಚಕ್ಕೆ ಆದ ವ್ಯಾಘಾತ ದೊಡ್ಡದಾಗಿತ್ತು.

ಮುಂದೆ 2 ವರ್ಷಗಳ ನಂತರ ಮತ್ತೆ ಚೇತರಿಸಿಕೊಂಡ ಗಿರೀಶ ದೂರದರ್ಶನಕ್ಕಾಗಿ 'ಚೆಲುವಿ' ಸಿದ್ಧಪಡಿಸಿದ್ದು ಸಮಾಧಾನವಾಗಿತ್ತು. ಕನ್ನಡ, ಹಿಂದೀ ಅಲ್ಲದೇ ವಿವಿಧ ಭಾಷೆಗಳ ಫಿಲ್ಮ್‌ಗಳಲ್ಲಿ ಆಯಾ ಭಾಷೆಗಳನ್ನು ಕಲಿತು ಅಭಿನಯಿಸುತ್ತಿದ್ದ ಅವರ ಕಲಾಶ್ರದ್ಧೆ ಮೆಚ್ಚುವಂತಿತ್ತು. ಉತ್ತರ ಕರ್ನಾಟಕದ ನಮ್ಮ ಒಬ್ಬ ಗೆಳೆಯ ಚಲನಚಿತ್ರ ಪ್ರಪಂಚದಲ್ಲಿ ಈ ಎತ್ತರಕ್ಕೆ ಬಂದದ್ದು ನಮಗೆ ಹೆಮ್ಮೆ ಅನಿಸುತ್ತಿತ್ತು. ಶೂದ್ರಕನ 'ಮೃಚ್ಛಕಟಿಕ'ವನ್ನು ನವೀನ ದೃಷ್ಟಿಯಿಂದ ನೋಡುವ ಪ್ರಯತ್ನ ಮಾಡಿದ 'ಉತ್ಸವ'ವನ್ನು ಚಿತ್ರೀಕರಿಸುವಾಗ ತಮ್ಮ ಪೂರ್ವಜರ ಊರುಗಳಾದ ಕಾರ್ನಾಡ, ಕುಂದಾಪುರ ಮುಂತಾದ ಕಡೆ ಶೂಟಿಂಗ್ ನಡೆಸಿದ್ದು ಮತ್ತೊಂದು ದೃಷ್ಟಿಯಿಂದ ಮಹತ್ವದ್ದಾಗಿತ್ತು.

***

ಗಿರೀಶ ಮದ್ರಾಸದಲ್ಲಿದ್ದಾಗ 'ಮದ್ರಾಸ್ ಪ್ಲೇಯರ್ಸ್'ದವರಿಗಾಗಿ 'ಕೇರ್ ಟೇಕರ್' ಮತ್ತು 'ಏವಂ ಇಂದ್ರಜಿತ್' ನಾಟಕಗಳನ್ನು ನಿರ್ದೇಶಿಸಿದ್ದರು. ಅದಾದ ಬಹಳ ಕಾಲದ ನಂತರ, ತಮ್ಮ 50ನೇ ಹುಟ್ಟುಹಬ್ಬದ ದಿನ, ಶಿಕ್ಯಾಗೋದಲ್ಲಿ ತಮ್ಮದೇ 'ನಾಗಮಂಡಲ'ದ ಇಂಗ್ಲಿಷ್ ಅನುವಾದವನ್ನು ಅಲ್ಲಿಯ ಕಲಾವಿದರಿಗೆ ನಿರ್ದೇಶಿಸಿದ್ದರು ('ಪ್ಲೇ ವಿಥ್ ಎ ಕೋಬ್ರಾ', 19.05.1988). ಅದರ ಮರುವರ್ಷ ಈ ನಾಟಕ ಕನ್ನಡದಲ್ಲಿ ಪ್ರಕಟವಾಗಿತ್ತು. ಗಿರೀಶ ಸ್ವತಃ ನಿರ್ದೇಶಿಸಿದ್ದು ಈ ಮೂರೇ ನಾಟಕ, ಅವುಗಳಲ್ಲಿ 'ಏವಂ ಇಂದ್ರಜಿತ್' ಮತ್ತು 'ಪ್ಲೇ ವಿಥ್ ಎ ಕೋಬ್ರಾ' ಎರಡನ್ನೂ ಇಂಗ್ಲಿಷಿಗೆ ಅನುವಾದಿಸಿದ್ದು ಗಿರೀಶರೇ.

ರಾಷ್ಟ್ರಮಟ್ಟದಲ್ಲಿ ಗಿರೀಶರಿಗೆ ಬೇರೆ ಬೇರೆ ನಿರ್ದೇಶಕರ ಪ್ರಯೋಗಗಳಿಂದ ಹೆಚ್ಚು ಖ್ಯಾತಿ, ಪ್ರಚಾರ ಲಭಿಸಿದೆ. ಅಲ್ಕಾಜಿ, ಓಮ್ ಶಿವಪುರಿ, ಮನೋಹರ್ ಸಿಂಗ್, ಶ್ಯಾಮಾನಂದ್ ಜಾಲಾನ್, ಅಲೆಕ್ ಪದಮ್‌ಸಿ, ಬಿ.ವಿ. ಕಾರಂತ, ವಿಜಯಾ ಮೆಹತಾ, ಸತ್ಯದೇವ್ ದುಬೆ ಮುಂತಾದವರ